## ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಗೊಟ್ಟಿಗೆರೆ ವಾರ್ಡ್ ಸಂಖ್ಯೆ–194,

## ವಾರ್ಡ್ ಕಛೇರಿಯಲ್ಲಿ ದಿನಾಂಕ: 03–10–2020 ರಂದು ವಿಡಿಯೋ ಕಾನ್ಫರೆನ್ಸಿಂಗ್ ಮುಖಾಂತರ ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ನಾಗರಿಕರುಗಳಿಗೆ ಪ್ರಮುಖವಾದ ಮೂಲಭೂತ ಸೌಕರ್ಯಗಳಾದ ಘನತ್ಯಾಜ್ಯ ವಸ್ತುಗಳ ನಿರ್ವಹಣೆ, ಸಾರ್ವಜನಿಕ ಆರೋಗ್ಯ, ಶಿಕ್ಷಣ, ನಗರದ ಸ್ವಚ್ಛತೆ, ರಸ್ತೆ ನಿರ್ವಹಣೆ / ನಿರ್ಮಾಣ, ಬೀದಿ ದೀಪಗಳ ನಿರ್ವಹಣೆ, ನೀರು ಸರಬರಾಜು ಮತ್ತು ಒಳಚರಂಡಿ ಮತ್ತು ಇನ್ನಿತರ ಕಲ್ಯಾಣ ಕಾರ್ಯಕ್ರಮಗಳಂತಹ ಹಲವಾರು ಸೌಲಭ್ಯಗಳನ್ನು ಪರಿಣಾಮಕಾರಿಯಾಗಿ ಒದಗಿಸುವ ನಿಟ್ಟಿನಲ್ಲಿ ಪಾಲಿಕೆಯ ವಾರ್ಡ್ ಹಂತದಲ್ಲಿ ವಾರ್ಡ್ ಸಮಿತಿಗಳನ್ನು ರಚಿಸುವ ಸಲುವಾಗಿ ಮಾನ್ಯ ಆಯುಕ್ತರು ರವರ ಕಛೇರಿ ಆದೇಶ ಸಂಖ್ಯೆ:ಬಿ12(5)/ಪಿ.ಆರ್./35/2020–21, ದಿನಂಕ: 21/09/2020 ರ ಆದೇಶದಂತೆ ವಾರ್ಡ್ ಸಂಖ್ಯೆ 194, ಗೊಟ್ಟಿಗೆರೆ ರ ನೋಡಲ್ ಅಧಿಕಾರಿಯನ್ನಾಗಿ ಶ್ರೀಮತಿ ವಿ.ಕೆ ರಮಾಮಣಿ, ಉಪ ಆಯುಕ್ತರು (ಮಾಹಿತಿ ತಂತ್ರಜ್ಞಾನ) ಬಿ.ಬಿ.ಎಂ.ಪಿ ರವರನ್ನು ನೇಮಿಸಲಾಗಿದ್ದು, ಸದರಿ ಸಭೆಯನ್ನು ದಿನಾಂಕ: 03–10–2020 ರಂದು ಬೆಳಿಗ್ಗೆ 11:00 ಘಂಟೆಗೆ ನಡೆಸಿದ್ದು ಸಭೆಗೆ ಈ ಕೆಳಕಂಡ ಅಧಿಕಾರಿ ವರ್ಗ / ಸದಸ್ಯರು ಮತ್ತು ಸ್ಥಳೀಯ ನಾಗರೀಕರು ಹಾಜರಾಗಿದ್ದರು:

| ಕ್ರ.ಸಂ. | ಹೆಸರು<br>(ಶ್ರೀ / ಶ್ರೀಮತಿ) | ಪದನಾಮ |
|---|---|---|
| 1. | ವಿ.ಕೆ ರಮಾಮಣಿ, ಕೆ.ಎಂ.ಎ.ಎಸ್ | (ಮಾಹಿತಿ ತಂತಜ್ಞಾನ), ಬಿಬಿಎಂಪಿ<br>ಅಧ್ಯಕ್ಷರು |
| 2. | ಶ್ರೀ ರಮೇಶ್.ಎನ್, | ಹಿರಿಯ ಆರೋಗ್ಯ ಪರಿವೀಕ್ಷಕರು<br>ಕಾರ್ಯದರ್ಶಿ |
| 3. | ಡಾ॥ ಲಕ್ಷ್ಮೀಪತಿ, , ಪ್ರಾಥಮಿಕ ಆರೋಗ್ಯ ಕೇಂದ್ರ, ಗೊಟ್ಟಿಗೆರೆ | ಆರೋಗ್ಯ ವೈದ್ಯಾಧಿಕಾರಿ, |
| 4. | ಶ್ರೀ ಮಹೇಂದ್ರ, ಕೆ.ಎಂ.ಎ.ಎಸ್, (Probationer), | ಕೋವಿಡ್–19 ನೋಡಲ್ ಅಧಿಕಾರಿ, |
| 5. | ಶ್ರೀ ವೆಂಕಟೇಶ್, | ಕಿರಿಯ ಆರೋಗ್ಯ ನಿರೀಕ್ಷಕರು, ಗೊಟ್ಟಿಗೆರೆ |
| 6. | ಶ್ರೀಮತಿ ವೀಣಾ ಕೇಶವಂತಿ, 9343171220. | ವಾತ್ಸಲ್ಯಾ ಚಾರಿಟೇಬಲ್ ಟ್ರಸ್ಟ್, (ರಿ) |
| 7. | ಶ್ರೀ ಸಿ.ಎಸ್ ನಾಗರಾಜ ರಾವ್, , 9535215301. | ಪರಿವರ್ತನ ಕ್ಷೇಮಾಭಿವೃದ್ಧಿ ಸಂಘ.(ರಿ) |
| 8. | ಶ್ರೀ ರಂಗೇಗೌಡ, ಅಧ್ಯಕ್ಷರು | ಸೌತ್ ಅವಿನ್ಯೂ ರೆಸಿಡೆನ್ಷಿಯಲ್ ವೆಲ್ ಫೇರ್ ಅಸೋಸಿಯೇಷನ್, ಗೊಟ್ಟಿಗೆರೆ |
| 9. | ಶ್ರೀ ಹರ್ಷ | ಅಧ್ಯಕ್ಷರು, ಐ.ಡಿ.ಬಿ.ಐ. ರೆಸಿಡೆನ್ಷಿಯಲ್ ವೆಲ್ ಫೇರ್ ಅಸೋಸಿಯೇಷನ್, ಗೊಟ್ಟಿಗೆರೆ |
| 10. | ಶ್ರೀಮತಿ ಜಾನಕಿ ಬಿ. ಶೆಟ್ಟಿ, ಅಧ್ಯಕ್ಷರು, | ಓಂ ವೆಲ್ ಫೇರ್ ಅಸೋಸಿಯೇಷನ್, 2ನೇ ಬ್ಲಾಕ್, ಕೊತ್ತನೂರು,<br>ಜೆ.ಪಿ. ನಗರ 8ನೇ ಹಂತ, ಬೆಂಗಳೂರು. |
| 11. | ಶ್ರೀ ಸುಧೀಂದ್ರನ್ | ಹಿಮಗಿರಿ ಮೆಡೋಸ್ ಓನರ್ಸ್ ವೆಲ್ ಫೇರ್ ಅಸೋಸಿಯೇಷನ್, ಗೊಟ್ಟಿಗೆರೆ |

Scanned by CamScanner

| | | |
|---|---|---|
| 12. | ಶ್ರೀ ಎಸ್.ಎಂ. ಹೆಗ್ಡೆ. | ಅಧ್ಯಕ್ಷರು, ಕ್ಲಾಸಿಕ್ ಆರ್ಚರ್ಡ್ಸ್ ಪ್ರಾಪರ್ಟಿ ಓನರ್ಸ್ ವೆಲ್ ಫೇರ್ ಅಸೋಸಿಯೇಷನ್, ಕೊತ್ತನೂರು |
| 13. | ಶ್ರೀ ಶಂಭುಲಿಂಗಯ್ಯ. | ಅಧ್ಯಕ್ಷರು, ಮಹಾ ಗಣಪತಿ ನಿವಾಸಿಗಳ ಸಂಘ |
| 14. | ಶ್ರೀ ಬಿ. ರಾಮಕೃಷ್ಣ. | ಅಧ್ಯಕ್ಷರು, ರೆಸಿಡೆನ್ಷಿಯಲ್ ವೆಲ್ ಫೇರ್ ಅಸೋಸಿಯೇಷನ್, ರಾಯಲ್ ಕೌಂಟಿ, 1ನೇ ಹಂತ, ಗೊಟ್ಟಿಗೆರೆ |
| 15. | ಶ್ರೀ ಸಿ.ಎಸ್. ನಾಗರಾಜ ರಾವ್ | ಅಧ್ಯಕ್ಷರು, ಪರಿವರ್ತನ ಸಂಘ, ರಾಯಲ್ ಕೌಂಟಿ 8ನೇ ಹಂತ, 2ನೇ ಬ್ಲಾಕ್ ಟಿ.ಕೆ. ದೀಪಕ್ ಲೇಔಟ್, ಜೆ.ಪಿ. ನಗರ, 8ನೇ ಹಂತ, ಬೆಂಗಳೂರು |
| 16. | ಚೈತನ್ಯ ಅಯ್ಯಂಗಾರ್ | ಸಾರಥಿನಗರ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘ, ಸಾರಥಿ ನಗರ, ಗೊಟ್ಟಿಗೆರೆ |
| 17. | ಶ್ರೀ ಶ್ರೀಧರ್, | ಅಧ್ಯಕ್ಷರು, ಪವಮಾನ ನಗರ ರೆಸಿಡೆನ್ಷಿಯಲ್ ಅಸೋಸಿಯೇಷನ್, ಗೊಟ್ಟಿಗೆರೆ |

ಸಭೆಯಲ್ಲಿ ಹಾಜರಾಗಿದ್ದ ಎಲ್ಲಾ ಅಧಿಕಾರಿಗಳು ಸದಸ್ಯರು ಹಾಗೂ ಸಾರ್ವಜನಿಕರಿಗೆ ಸ್ವಾಗತವನ್ನು ಕೋರುತ್ತಾ ಸಭೆಯ ಅಧ್ಯಕ್ಷರು ಮಾನ್ಯ ಆಯುಕ್ತರು ರವರ ಆದೇಶ ಸಂಖ್ಯೆ: ಬಿ12(5)/ಪಿಆರ್/35/2020-21, ದಿನಾಂಕ: 03-10-2020 ರ ಆದೇಶದಂತೆ, ವಾರ್ಡ್ ಸಂಖ್ಯೆ 194, ಗೊಟ್ಟಿಗೆರೆ ಕ್ಕೆ ಶ್ರೀಮತಿ ವಿ.ಕೆ ರಮಾಮಣಿ, ಉಪ ಆಯುಕ್ತರು (ಮಾಹಿತಿ ತಂತ್ರಜ್ಞಾನ) ರವರನ್ನು ನೋಡಲ್ ಅಧಿಕಾರಿಯಾಗಿ ನೇಮಿಸಿರುವುದಾಗಿ ಸಭೆಗೆ ಪರಿಚಯಿಸಿಕೊಳ್ಳುತ್ತಾ ವಾರ್ಡ್ ನಲ್ಲಿ ಮೂಲಭೂತ ಸೌಕರ್ಯಗಳನ್ನು ಸರಾಗವಾಗಿ ಒದಗಿಸುವ ಬಗ್ಗೆ ಈ ಕೆಳಕಂಡ ವಿಷಯಗಳ ಕುರಿತು ಚರ್ಚಿಸಲಾಯಿತು.

1. ಶ್ರೀ ಲಕ್ಷ್ಮೀಪತಿ, ಆರೋಗ್ಯ ವೈದ್ಯಾಧಿಕಾರಿ (ಪಿ.ಹೆಚ್.ಸಿ) ಗೊಟ್ಟಿಗೆರೆ ರವರು ಕೋವಿಡ್-19 ಮಹಾಮಾರಿಯನ್ನು ನಿಯಂತ್ರಿಸುವ ನಿಟ್ಟಿನಲ್ಲಿ ಸಾರ್ವಜನಿಕರು ಪಾಲಿಸಬೇಕಾದಂತ ನಿಯಮಗಳ ಬಗ್ಗೆ ವಾರ್ಡ್‌ನ ವ್ಯಾಪ್ತಿಯಲ್ಲಿ ನಾಗರೀಕರಿಗೆ ಅರಿವು ಮೂಡಿಸುವ ಬಗ್ಗೆ ಕ್ರಮ ವಹಿಸಲು ಸಲಹೆ ನೀಡುತ್ತಾ ಸದರಿ ಕೋವಿಡ್-19 ಗೆ ಸಂಬಂಧಿಸಿದಂತೆ Testing, Quarantine, Home Isolation, ಇತರೆ ಸಹಾಯಕ್ಕಾಗಿ ದೂರವಾಣಿ ಸಂಖ್ಯೆ 8884666670 ಸಹಾಯವಾಣಿಯನ್ನು ಸಂಪರ್ಕಿಸಲು ಸೂಚಿಸಿರುತ್ತಾರೆ. ಮಾಸ್ಕ್, ಸಾಮಾಜಿಕ ಅಂತರ ಕಡ್ಡಾಯವಾಗಿ ಪಾಲಿಸಲು ಕೋರುತ್ತಾ ಸಭೆಯ ಅಧ್ಯಕ್ಷರು ಸ್ಥಳೀಯ ಸಂಘಗಳು ತಮ್ಮ ಬಡಾವಣೆಯ ಅಪಾರ್ಟ್‌ಮೆಂಟ್ಸ್/ಕಾಂಪ್ಲೆಕ್ಸ್ ಗಳಲ್ಲಿ ಪರೀಕ್ಷಾ ಶಿಬಿರವನ್ನು ಆಯೋಜಿಸಲು ವೈದ್ಯಾಧಿಕಾರಿಗಳನ್ನು ಸಂಪರ್ಕಿಸಲು ತಿಳಿಸಿರುತ್ತಾರೆ.

2. ಸೌತ್ ಅವೆನ್ಯೂ ಲೇಔಟ್ ರೆಸಿಡೆನ್ಷಿಯಲ್ ವೆಲ್ ಫೇರ್ ಅಸೋಸಿಯೇಷನ್ ನ ಅಧ್ಯಕ್ಷರಾದ ಶ್ರೀ ರಂಗೇಗೌಡ ರವರು ಹಾಗೂ ಶ್ರೀ ದ್ರೋಣನ್ ರವರು BWSSD ವತಿಯಿಂದ ನಿರ್ಮಾಣವಾಗುತ್ತಿರುವ ಓಳಚರಂಡಿ ಕಾಮಗಾರಿಯನ್ನು ತ್ವರಿತವಾಗಿ ಪೂರ್ಣಗೊಳಿಸಲು, ರಸ್ತೆಗಳನ್ನು ದುರಸ್ಥಿಪಡಿಸಲು ಹಾಗೂ ರಸ್ತೆ ಬದಿಯಲ್ಲಿ ಬೆಳೆದಿರುವ ಗಿಡಗಳನ್ನು ತೆರುವುಗೊಳಿಸಲು ಕೋರಿರುತ್ತಾರೆ.

ಈ ಸಂಬಂಧ ಸಭೆಯಲ್ಲಿ ಹಾಜರಿದ್ದ, ಸಹಾಯಕ ಕಾರ್ಯಪಾಲಕ ಅಭಿಯಂತರರು (BWSSD), ರವರು ಸಭೆಯ ನಂತರ ಸ್ಥಳವನ್ನು ಪರಿಶೀಲಿಸಿ ಕ್ರಮ ಕೈಗೋಳ್ಳುವುದಾಗಿ ಸಭೆಗೆ ತಿಳಿಸಿರುತ್ತಾರೆ ಮತ್ತು ಆರೋಗ್ಯ ಪರಿವೀಕ್ಷಕರಿಗೆ ಸ್ಥಳವನ್ನು ಪರಿಶೀಲಿಸಿ ಸ್ವಚ್ಛಗೊಳಿಸಲು ಅಗತ್ಯ ಕ್ರಮ ವಹಿಸಲು ಸೂಚಿಸಲಾಯಿತು.

3. ಶ್ರೀ ಮಂಜುನಾಥ್ ರವರು ಸಾರಥೀನಗರದಲ್ಲಿ ಖಾಲಿ ನಿವೇಶನಗಳಲ್ಲಿ ಎಸೆಯುತ್ತಿರುವ ಕೋಳಿ ಮಾಂಸ ತ್ಯಾಜ್ಯವನ್ನು ತಡೆಗಟ್ಟಲು ಹಾಗೂ ಎಲ್ಲಾ ದುರಸ್ಥಿಗೊಂಡಿರುವ ಬೀದಿ ದೀಪಗಳನ್ನು ಸರಿಪಡಿಸಲು ಕೋರಿರುತ್ತಾರೆ.

Scanned by CamScanner

ಈ ಸಂಬಂಧ ಸೂಕ್ತ ಕ್ರಮ ಕೈಗೊಳ್ಳಲು ಹಾಜರಿದ್ದ ಕಿರಿಯ ಆರೋಗ್ಯ ಪರಿವೀಕ್ಷರಿಗೆ ಹಾಗೂ ಸಂಬಂಧಪಟ್ಟ ವಾರ್ಡ್ ಇಂಜಿನಿಯರ್ ರವರಿಗೆ ಅಗತ್ಯ ಕ್ರಮವಹಿಸಲು.

4. ಸುಧೀಂದ್ರನ್ ಹಿಮಗಿರಿ ಮೆಡೋಸ್ ರವರು Individual Immunity Tablets ಬಗ್ಗೆ ಸಲಹೆಯನ್ನು ಕೋರಿದರು.

ಈ ಸಂಬಂಧ ಡಾ॥ ಲಕ್ಷ್ಮಿಪತಿ ಆರೋಗ್ಯ ವೈದ್ಯಾಧಿಕಾರಿ ರವರು ಆಹಾರದ ಮೂಲಕ ಪಡೆಯಬಹುದಾದ Nutrients ಹಾಗೂ Vitamin/Mineral suppliments ಬಗ್ಗೆ ತಿಳಿಸಿರುತ್ತಾರೆ.

5. ಐ.ಡಿ.ಬಿ.ಐ ರೆಸಿಡೆನ್ಷಿಯಲ್ ವೆಲ್ ಫೇರ್ ಅಸೋಸಿಯೇಷನ್, ಶ್ರೀ ಹರ್ಷ ರವರು ಒಳಚರಂಡಿ ಕಾಮಗಾರಿಯನ್ನು ಪೂರ್ಣಗೊಳಿಸಲು ಕೋರಿರುತ್ತಾರೆ.

ಈ ಸಂಬಂಧ ಸಭೆಯಲ್ಲಿ ಹಾಜರಿದ್ದ, ಸಹಾಯಕ ಕಾರ್ಯಪಾಲಕ ಅಭಿಯಂತರರು (BWSSD), ರವರು ಕೊನೆಯ ಮೈಲಿ ಸಂಪರ್ಕ ವನ್ನು ಅಳವಡಿಸಲು ಜಾಗೆಯ ಬಗ್ಗೆ ಸೂಕ್ತ ಕ್ರಮ ಕೈಗೋಳ್ಳಲಾಗುತ್ತಿರುವ ಬಗ್ಗೆ ಸಭೆಗೆ ತಿಳಿಸಿರುತ್ತಾರೆ.

6. ಪರಿವರ್ತನ ಸಂಘ, ರಾಯಲ್ ಕೌಂಟಿಯ, ಶ್ರೀ ಸಿ.ಎಸ್. ನಾಗರಾಜ ರಾವ್ ರವರು ತಮ್ಮ ಬಡಾವಣೆಯಲ್ಲಿ ಕೋವಿಡ್ ಪಾಸಿಟಿವ್ ಪ್ರಕರಣಗಳು ಬಂದ ಕೂಡಲೇ ಸ್ಯಾನಿಟೈಝೇಷನ್ ಮಾಡಲು ಕೋರಿರುತ್ತಾರೆ. ಮುಂದುವರೆದು, ರಸ್ತೆ ಬದಿಯ ಚರಂಡಿಗಳಿಗೆ covering slabs ಗಳನ್ನು ಅಳವಡಿಸಲು ಕೋರಿರುತ್ತಾರೆ.

ಸದರಿ ವಿಷಯದ ಬಗ್ಗೆ ಆರೋಗ್ಯ ಪರಿವೀಕ್ಷಕರು, ಸ್ಯಾನಿಟೈಝ್ ಮಾಡುತ್ತಿರುವ ಬಗ್ಗೆ ವಿವರಿಸುತ್ತಾ ಕುಂದು ಕೊರತೆಗಳಿದ್ದಲ್ಲಿ ತಮ್ಮನ್ನು ಸಂಪರ್ಕಿಸಲು ದೂರವಾಣಿ ಸಂಖ್ಯೆಯನ್ನು ಹಂಚಿಕೊಂಡಿರುತ್ತಾರೆ. ಚರಂಡಿಗಳ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಲು ಸಂಬಂಧಪಟ್ಟ ಅಭಿಯಂತರರಿಗೆ ತಿಳಿಸಲು ಸಭೆಯ ಕಾರ್ಯದರ್ಶಿ ರವರಿಗೆ ಸೂಚಿಸಲಾಯಿತು.

7. ಶ್ರೀ ಶ್ರೀಧರ್, ಕೆಂಬತ್ತಹಳ್ಳಿ ರವರ ಮಾತನಾಡುತ್ತಾ ಬೀದಿ ನಾಯಿಗಳ ಸಂಖ್ಯೆ ಹೆಚ್ಚಾಗುತ್ತಿದ್ದು, ಸೂಕ್ತ ಕ್ರಮ ಕೈಗೊಳ್ಳಲು ಕೋರಿರುತ್ತಾರೆ ಅಲ್ಲದೆ ಹಲವಾರು ಬೀದಿ ದೀಪಗಳು ಹಳೆಯದಾಗಿದ್ದು ಅವುಗಳನ್ನು ಬದಲಾಯಿಸಲು ಕೋರಿರುತ್ತಾರೆ.

ಈ ಸಂಬಂಧ ಸೂಕ್ತ ಕ್ರಮಕೈಗೊಳ್ಳಲು, ಸಹಾಯಕ ನಿರ್ದೇಶಕರು ಪಶುಪಾಲನೆ ಹಾಗೂ ಬೀದಿ ದೀಪಗಳ ನಿರ್ವಹಣ ಗುತ್ತಿಗೆದಾರರಿಗೆ ತಿಳಿಸಲು ಸಭೆಯ ಕಾರ್ಯದರ್ಶಿ ರವರಿಗೆ ಸೂಚಿಸಲಾಯಿತು.

8. BDA Layout, 7th Cross, 9th Phase, J.P Nagar ರಸ್ತೆ ಬದಿಯಲ್ಲಿ ಹಾಗೂ ಸುಬ್ಬರಾಯನ ಕೆರೆಯ ಹಲವೆಡೆ ತ್ಯಾಜ್ಯವನ್ನು ಎಸೆಯುತ್ತಿರುವ ಬಗ್ಗೆ ಕ್ರಮ ಕೈಗೊಳ್ಳಲು ಹಾಗೂ ಒಳಚರಂಡಿ ಕಾಮಗಾರಿಯನ್ನು ಪೂರ್ಣಗೊಳಿಸಲು ಕೋರಿರುತ್ತಾರೆ.

ಈ ಹಿನ್ನೆಲೆಯಲ್ಲಿ ಆರೋಗ್ಯ ಪರಿವೀಕ್ಷಕರಿಗೆ ತ್ಯಾಜ್ಯವನ್ನು ತೆರವುಗೊಳಿಸಲು ಸೂಚಿಸಲಾಯಿತು ಮತ್ತು ಒಳಚರಂಡಿ ಕಾಮಗಾರಿಯ ಪ್ರಗತಿಯ ಬಗ್ಗೆ ಮುಂದಿನ ಸಭೆಯಲ್ಲಿ ವರದಿ ಸಲ್ಲಿಸಲು ಸಹಾಯಕ ಕಾರ್ಯಪಾಲಕ

Scanned by CamScanner

ಅಭಿಯಂತರರು (BWSSB) ರವರಿಗೆ ಸೂಚಿಸಲಾಯಿತು.

ಈ ಮೇಲ್ಕಂಡ ಎಲ್ಲಾ ವಿಷಯಗಳನ್ನು ಹಾಗೂ ಸಮಸ್ಯೆಗಳನ್ನು ಬರುವ ಮುಂದಿನ ಸಭೆಯೊಳಗಾಗಿ ನಿವಾರಣೆ ಮಾಡಿ ಅನುಪಾಲನೆ ವರದಿಯನ್ನು ಸಂಬಂಧಪಟ್ಟ ಅಧಿಕಾರಿಗಳು ಕಳುಹಿಸಿಕೊಡಬೇಕಾಗಿ ಈ ಮೂಲಕ ಸೂಚಿಸುತ್ತಾ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಕಾರ್ಯದರ್ಶಿಗಳು
ಹಾಗೂ ಹಿರಿಯ ಆರೋಗ್ಯ ಪರಿವೀಕ್ಷಕರು
ವಾರ್ಡ್ ಸಂಖ್ಯೆ: 194,

ಪ್ರತಿಯನ್ನು:-

1. ಮಾನ್ಯ ಆಯುಕ್ತರು ರವರ ಅವಗಾಹನೆಗೆ ಸಲ್ಲಿಸಲು ಆಪ್ತ ಕಾರ್ಯಾಲಯಕ್ಕೆ ಸಲ್ಲಿಸಿದೆ.
2. ಮಾನ್ಯ ವಿಶೇಷ ಆಯುಕ್ತರು (ಯೋಜನೆ) ರವರ ಅವಗಾಹನೆಗೆ ಸಲ್ಲಿಸಿದೆ.
3. ಮಾನ್ಯ ವಿಶೇಷ ಆಯುಕ್ತರು (ಘನತ್ಯಾಜ್ಯ) ರವರ ಅವಗಾಹನೆಗೆ ಸಲ್ಲಿಸಿದೆ.
4. ಜಂಟಿ ಆಯುಕ್ತರು (ಬೊಮ್ಮನಹಳ್ಳಿ) ರವರ ಅವಗಾಹನೆಗೆ ಸಲ್ಲಿಸಿದೆ.
5. ಮುಖ್ಯ ಅಭಿಯಂತರರು (ಬೊಮ್ಮನಹಳ್ಳಿ) ರವರ ಅವಗಾಹನೆಗೆ ಸಲ್ಲಿಸಿದೆ.
6. ಅಧೀಕ್ಷಕ ಅಭಿಯಂತರರು (ಬೊಮ್ಮನಹಳ್ಳಿ) ರವರ ಅವಗಾಹನಗೆ ಸಲ್ಲಿಸಿದೆ.
7. ಕಾರ್ಯಪಾಲಕ ಅಭಿಯಂತರರು, ಬಿಬಿಎಂಪಿ, ಗೊಟ್ಟಿಗೆರೆ ರವರಿಗೆ ಸೂಕ್ತ ಕ್ರಮಕ್ಕಾಗಿ ಸಲ್ಲಿಸಿದೆ.
8. ಸಹಾಯಕ ಕಾರ್ಯಪಾಲಕ ಅಭಿಯಂತರರು, BWSSB , ಗೊಟ್ಟಿಗೆರೆ ರವರಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸದೆ.
9. ಸಹಾಯಕ ನಿರ್ದೇಶಕರು (ಪಶುಪಾಲನೆ), ಗೊಟ್ಟಿಗೆರೆ ರವರಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸದೆ.
10. ಕಾರ್ಯಪಾಲಕ ಅಭಿಯಂತರರು, ವಿದ್ಯುತ್ (ಬೊಮ್ಮನಹಳ್ಳಿ) ವಲಯ ಬಿಬಿಎಂಪಿ.
11. ಕಾರ್ಯಪಾಲಕ ಅಭಿಯಂತರರು, ಬೆಸ್ಕಾಂ.
12. ಕಾರ್ಯಪಾಲಕ ಅಭಿಯಂತರರು, ರಸ್ತೆ ಮತ್ತು ಮೂಲಭೂತ ಸೌಕರ್ಯಗಳು, ಬಿಬಿಎಂಪಿ.
13. ಕಾರ್ಯಪಾಲಕ ಅಭಿಯಂತರರು, ಕೆರೆಗಳ ವಿಭಾಗ ಬಿಬಿಎಂಪಿ.
14. ಕಾರ್ಯಪಾಲಕ ಅಭಿಯಂತರರು, ಬೃಹತ್ ನೀರುಗಾಲುವೆ ವಿಭಾಗ ಬಿಬಿಎಂಪಿ.
15. ತೋಟಗಾರಿಕೆ ಅಧೀಕ್ಷಕರು, ಬೊಮ್ಮನಹಳ್ಳಿ ವಲಯ.
16. ಆರೋಗ್ಯ ವೈದ್ಯಾಧಿಕಾರಿಗಳು, ಬೊಮ್ಮನಹಳ್ಳಿ ವಲಯ.
17. ಪಶುಪಾಲನೆ ಇಲಾಖೆ ಬೊಮ್ಮನಹಳ್ಳಿವಲಯ.
18. ಕಾಂಟ್ರಾಕ್ಟ್ ಟ್ರೇಸಿಂಗ್ ನೋಡೆಲ್ ಅಧಿಕಾರಿ, ಅಂಜನಾಪುರ ವಿಭಾಗ
19. ಹೋಮ್ ಕ್ವಾರೆಂಟೈನ್ ಸ್ಕ್ವಾಡ್ ನೋಡೆಲೆ ಅಧಿಕಾರಿ ಅಂಜನಾಪುರ ವಿಭಾಗ.
20. ಆರೋಗ್ಯ ವೈದ್ಯಾಧಿಕಾರಿಗಳು, ಪ್ರಾಥಮಿಕ ಆರೋಗ್ಯ ಕೇಂದ್ರ,
21. ಸಹಾಯಕ ಕಾರ್ಯಪಾಲಕ ಅಭಿಯಂತರರು ಘನತ್ಯಾಜ್ಯ ನಿರ್ವಹಣಾ ವಿಭಾಗ.
22. ಸಹಾಯಕ ಕಂದಾಯ ಅಧಿಕಾರಿ ಅಂಜನಾಪುರ ವಿಭಾಗ.
23. ಕಲ್ಯಾಣಾಧಿಕಾರಿಗಳು ಬೊಮ್ಮನಹಳ್ಳಿ ವಲಯ.
24. ಉಪವಲಯ ಅರಣ್ಯ ಸಂರಕ್ಷಣಾಧಿಕಾರಿಗಳು, ಬೊಮ್ಮನಹಳ್ಳಿ ವಲಯ.
25. ಪೋಲೀಸ್ ಇನ್ಸ್‌ಪೆಕ್ಟರ್, ಹುಳಿಮಾವು ಮತ್ತು ಕೋಣನಕುಂಟೆ ಪೋಲೀಸ್ ಠಾಣೆ.
26. ಕಂದಾಯ ಅಧಿಕಾರಿಗಳು, ಅಂಜನಾಪುರ ಉಪ ವಲಯ.
27. ಸ್ಥಳೀಯ ನಾಗರಿಕ ಕಲ್ಯಾಣ ಸಂಸ್ಥೆಗಳು.

Scanned by CamScanner